9 MAR 2018

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್:08232-236255

ಇಮೇಲ್:aeemdr2@rediffmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರಕಛೇರಿ,
ಗ್ರಾಮಾಂತರ ಉಪ ವಿಭಾಗ, ಮದ್ದೂರು

ಕ್ರಮಾಂಕ:ಸಕಾನಿಇಂ.(ವಿ)/ಹಿಸ/ಗ್ರಾ.ಉವಿ/ಮದ್ದೂರು/ 3370 - 78 ದಿನಾಂಕ: 6.3.2018

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ವಿಭಾಗೀಯ ಕಛೇರಿಯಲ್ಲಿ ದಿನಾಂಕ: 23.02.2018 ರಂದು ಜರುಗಿದ ಗ್ರಾಮಾಂತರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರ ವಿವರ

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂಧಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ರವಿಶಂಕರ್ | ಅಇಂ(ವಿ) | ವೃತ್ತ, ಕಛೇರಿ, ಮಂಡ್ಯ |
| 2 | ಶ್ರೀ ರವಿಶಂಕರ್ | ಕಾನಿಇಂ(ವಿ) | ವೃತ್ತ, ಕಛೇರಿ, ಮಂಡ್ಯ |
| 3 | ಶ್ರೀಮತಿ ಶ್ವೇತಾ ಎಂ.ಎಸ್. | ಸಕಾಇಂ(ವಿ) | ವಿಭಾಗೀಯ ಕಛೇರಿ, ಮದ್ದೂರು |
| 4 | ಶ್ರೀ ಶ್ರೀಕಾಂತ್ ಎಸ್ | ಸಕಾಇಂ(ವಿ) | ಉಪವಿಭಾಗ-2, ಮದ್ದೂರು |
| 5 | ಶ್ರೀ ಜಿ.ಯು.ಮಂಜುನಾಥ್ | ಸಕಾಇಂ(ವಿ) | ಉಪವಿಭಾಗ-1, ಮದ್ದೂರು |
| 6 | ಶ್ರೀಮತಿ ಸುವರ್ಣ | ಸಇಂ(ತಾ) | ಉಪವಿಭಾಗ-1, ಮದ್ದೂರು |
| 7 | ಶ್ರೀ ಶರಣಪ್ಪ | ಕಿಇಂ(ವಿ) | ಕೆಸ್ತೂರು ಶಾಖೆ |
| 8 | ಶ್ರೀ ಸಂತೋಷ್ ಎಂ | ಕಿಇಂ(ವಿ) | ಬೆಸಗರಹಳ್ಳಿ ಶಾಖೆ |
| 9 | ಶ್ರೀ ಶಿವರಾಜು | ಕಿಇಂ(ವಿ) | ಕೌಡ್ಲೆ ಶಾಖೆ |
| 10 | ಶ್ರೀ ನಾಗೇಶ್ | ಕಿಇಂ(ವಿ) | ಕೊಪ್ಪ ಶಾಖೆ |
| 11 | ಶ್ರೀ ತೇಜ್ ಪ್ರಕಾಶ್ | ಕಿಇಂ(ವಿ) | ಕೆ.ಹೊನ್ನಲಗೆರೆ ಶಾಖೆ |
| 12 | ಶ್ರೀ ಮಹೇಶ್ | ಹಿರಿಯ ಸಹಾಯಕ | ಮದ್ದೂರು ಉಪವಿಭಾಗ-1 |

SEE (Elect) / DCA / EEE / CAQC / AO Dvn. / AO (I/A) / SEE

AEE S.R. DLD

ವೃತ್ತ ಕಛೇರಿ

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಅಧೀಕ್ಷಕ ಇಂಜಿನಿಯರ್(ವಿ)ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಿಯಿಸಿ ಉತ್ತರಿಸಲಾಯಿತು.

ಗ್ರಾಹಕರು -ಶ್ರೀ ಕೃಷ್ಣೇಗೌಡ, ಬಸವಲಿಂಗನದೊಡ್ಡಿ

| ಕ್ರಮ ಸಂಖ್ಯೆ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| 1 | ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಕಾಮಗಾರಿ ಅಪೂರ್ಣಗೊಂಡಿದ್ದು ಪೂರ್ಣಗೊಳಿಸಲು ಕೋರಿದರು. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ ಕಾಮಗಾರಿ ನಡೆಯುವ ಸ್ಥಳದಲ್ಲಿ ತಕರಾರು ಆಗಿದ್ದು ಶೀಘ್ರದಲ್ಲಿ ಪರಿಹರಿಸಿ ಕೆಲಸ ಪೂರ್ಣಗೊಳಿಸುವುದಾಗಿ ತಿಳಿಸಿದರು (ಕಾರ್ಯಾದೇಶ ಸಂಖ್ಯೆ Y-25684 ದಿ:02.06.2017) |
| ಗ್ರಾಹಕರು- ಬ್ಯಾಡರಹಳ್ಳಿ ಗ್ರಾಮ | | |
| 2 | ಗ್ರಾಮದ ಎನ್‌ಜೆವೈ ಲೈನ್ ಕೇಬಲ್ ಸುಟ್ಟಿದ್ದು ಗ್ರಾಮಕ್ಕೆ ಸರಿಯಾದ ವಿದ್ಯುತ್ ಸಂಪರ್ಕವಿಲ್ಲ. ಸರಿಪಡಿಸಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಮಾದರಿ ವಿದ್ಯುತ್ ಗ್ರಾಮ ಯೋಜನೆಯಡಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿ ಮುಂದಿನ ದಿನಗಳಲ್ಲಿ ಸಮರ್ಪಕ ವಿದ್ಯುತ್ ಪೂರೈಸುವುದಾಗಿ ತಿಳಿಸಿದರು. |
| ಗ್ರಾಹಕರು- ಶ್ರೀ ಮುತ್ತುರಾಜು, ತೂಪ್ಪನಹಳ್ಳಿ ಗ್ರಾಮ | | |
| 3 | ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಕಾರ್ಯಾದೇಶವಾಗಿದ್ದು, ಜರೂರಾಗಿ ಕಾಮಗಾರಿ ಪೂರ್ಣಗೊಳಿಸಲು ಕೋರಿದರು. (ಅವಾರ್ಡ್ ಸಂಖ್ಯೆ 58) | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸದರಿ ಗ್ರಾಹಕರಿಗೆ ಕಾಮಗಾರಿಯ ಬಗ್ಗೆ ತಿಳಿಸಿ ಹೇಳುತ್ತಾ ಕಾಮಗಾರಿಗಳು ತುರ್ತಾಗಿ ನಡಯುತ್ತಿವೆ. ದಿನೇ ದಿನೇ ಬೇಸಿಗೆ ಹೆಚ್ಚಾಗಿದ್ದು ಬೆಳೆಗಳು ಒಣಗುತ್ತಿರುವುದರಿಂದ ಸಮಸ್ಯೆ ಹೆಚ್ಚಾಗುತ್ತಿದ್ದು ಜರೂರಾಗಿ ಕಾಮಗಾರಿ ನಿರ್ವಹಿಸಲು ತಿಳಿಸುವುದಾಗಿ ತಿಳಿಸಿದರು. |
| ಗ್ರಾಹಕರು- ಶ್ರೀ ಚಂದ್ರು, ಕುಮಾರ್, ಲಕ್ಷ್ಮಣ್, ಬನ್ನಳ್ಳಿ ಹಾಗೂ ಹಾಗಲಹಳ್ಳಿ ಗ್ರಾಮ | | |
| 4 | ಕಳೆದ 1 ವಾರದಿಂದ ಐಪಿ ಸೆಟ್‌ಗಳಿಗೆ ವಿದ್ಯುತ್ ಇಲ್ಲ. ಐಪಿ ಸೆಟ್‌ನಂಬಿ ಭಿತ್ತನೆ ಮಾಡಿದ್ದೇವೆ. ನಾಟಿ ಮಾಡುವ ಸಮಯಕ್ಕೆ ಸರಿಯಾಗಿ ಒಂದು ವಾರದಿಂದ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ದಯಮಾಡಿ ಸಮಸ್ಯೆ ಬಗೆಹರಿಸಿ. ಬೆಳೆ ಬೆಳೆಯಲು ಐಪಿ ಸೆಟ್‌ಗೆ ವಿದ್ಯುತ್ ಕೊಡಿಸಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಶಾಖಾಧಿಕಾರಿಯನ್ನು ಕೇಳಲಾಗಿ ಸದರಿ ಗ್ರಾಮಗಳಿಗೆ ಸಂಬಂಧಪಟ್ಟ ಫೀಡರ್ ಅಧಿಕ ಭಾರ & ಒತ್ತಡದಿಂದ ಕೂಡಿದ್ದು ಸಮಸ್ಯೆ ಹೆಚ್ಚಾಗಿರುವುದರಿಂದ ಸಮರ್ಪಕ ವಿದ್ಯುತ್ ಪೂರೈಕೆ ಮಾಡಲಾಗುತ್ತಿಲ್ಲವೆಂದು ತಿಳಿಸಿದರು. ಮುಂದುವರೆದು ಸಮಸ್ಯೆ ಬಗೆಹರಿಯುವವರೆಗೆ ತಾತ್ಕಾಲಿಕವಾಗಿ Express Feeder ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿದರು. ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸದರಿ ಸಮಸ್ಯೆಯ ಬಗ್ಗೆ ವೃತ್ತ ಕಛೇರಿಗೆ ದೂರವಾಣಿ ಸಂದೇಶ ನೀಡಲು ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿದರು. |

| | | |
|---|---|---|
| ಗ್ರಾಹಕರು- ಶ್ರೀ ಸತೀಶ್, ಬನ್ನಳ್ಳಿ ಗ್ರಾಮ | | |
| 5 | ತುರ್ತು ಕಾಮಗಾರಿ ಯೋಜನೆಯಡಿ ಕಾಮಗಾರಿ ಪೂರ್ಣಗೊಂಡಿದ್ದು ಪರಿವರ್ತಕ ಕೊಡಿಸಿಕೊಡಬೇಕೆಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಜರೂರಾಗಿ ಕೊಡಿಸಿ ಕೊಡುವುದಾಗಿ ತಿಳಿಸಿದರು. |
| ಗ್ರಾಹಕರು- ಶ್ರೀ ಬಿ.ಎಂ.ಶಂಕರ್, ಬೆಕ್ಕಳಲೆ ಗ್ರಾಮ | | |
| 6 | ಐಪಿ ಸೆಟ್‌ಗೆ ಸರಿಯಾದ ಸಮಯಕ್ಕೆ ವಿದ್ಯುತ್ ಪೂರೈಕೆಯಾಗುತ್ತಿಲ್ಲವೆಂದು ತಿಳಿಸಿದರು. ಹಾಗೂ ಕೆಪಿಟಿಸಿಎಲ್/ಎಂಯುಎಸ್ಎಸ್ ನವರು ವಿದ್ಯುತ್ ಪೂರೈಕೆಯ ಬಗ್ಗೆ ಸರಿಯಾದ ಮಾಹಿತಿ ನೀಡುವುದಿಲ್ಲವೆಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಬೇಸಿಗೆ ಹೆಚ್ಚಾಗಿದ್ದು ವಿದ್ಯುತ್ ಪೂರೈಕೆಯಲ್ಲೂ ಕೂಡ ಕೆಲವೊಮ್ಮೆ ಸಮಸ್ಯೆ ಆಗುತ್ತಿರುವುದಾಗಿ ತಿಳಿಸಿದರು. ಮುಂದಿನ ಸಭೆಯ ವೇಳೆ ಕೆಪಿಟಿಸಿಎಲ್/ಎಂಯುಎಸ್ಎಸ್‌ನ ಸಹಾಯಕ ಇಂಜಿನಿಯರ್/ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರನ್ನು ಸಭೆಗೆ ಕರೆಸಲು ಮೇಲಾಧಿಕಾರಿಗಳ ಜೊತೆ ಚರ್ಚಿಸುವುದಾಗಿ ತಿಳಿಸಿದರು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಭೆಯಲ್ಲಿದ್ದ ಕಿರಿಯ ಇಂಜಿನಿಯರ್(ವಿ)/ಸಹಾಯಕ ಇಂಜಿನಿಯರ್(ವಿ)ಗಳಿಗೆ ಬೇಸಿಗೆ ಕಾಲದ ಅರಿವು ಮೂಡಿಸುತ್ತಾ, ರೈತರು ಬೆಳೆದ ಬೆಳೆಯೇ ರೈತನ ಬಾಳಿಗೆ ಜೀವನಾಧಾರ. ರೈತರ ಜೊತೆ ನೌಕರರು/ ಅಧಿಕಾರಿಗಳಾದ ನೀವುಗಳು ಸಹಕರಿಸಿ, ಕರ್ತವ್ಯ ನಿರ್ವಹಿಸಿ. ಪೂರೈಕೆಯಾಗುತ್ತಿರುವ ವಿದ್ಯುತ್ತನ್ನ ರೈತರ ಐಪಿ ಸೆಟ್‌ಗಳಿಗೆ ಸಮರ್ಪಕವಾಗಿ ತಲುಪುವಂತೆ ನೋಡಿಕೊಳ್ಳಿ. ರೈತನು ಬೆಳೆದ ಬೆಳೆ ಮಕ್ಕಳ ಸಮಾನ. ಮಕ್ಕಳನ್ನು ರಕ್ಷಿಸುವಂತೆ ಬೆಳೆಗಳನ್ನು ರಕ್ಷಿಸುತ್ತಾರೆ ಅದಕ್ಕೆ ನಿಮ್ಮ-ನಮ್ಮೆಲ್ಲರ ಸಹಕಾರವಿರಬೇಕು ಎಂದು ತಿಳಿಸಿದರು. ಅಲ್ಲದೇ ಐಪಿ ಸೆಟ್‌ಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡಿದ್ದು ಬೇಸಿಗೆ ಹೆಚ್ಚಾಗಿರುವುದರಿಂದ ಮುಂದಿನ ದಿನಗಳಲ್ಲಿ ಅಕ್ರಮ-ಸಕ್ರಮ ಯೋಜನೆಯ ಗುತ್ತಿಗೆದಾರರಿಗೆ ತಿಳಿಸಿ ಈಗ ಕೆಲಸ ಮಾಡುತ್ತಿರುವ ತಂಡದೊಂದಿಗೆ ಮತ್ತೊಂದು ತಂಡ ರಚಿಸಿ ಜರೂರಾಗಿ ಕಾಮಗಾರಿ ನಿರ್ವಹಿಸಲು ಕ್ರಮ ಕೈಗೊಳ್ಳುವುದಾಗಿ ರೈತರಿಗೆ ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಗ್ರಾಮಾಂತರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ಉಪವಿಭಾಗ-1 ರವರ ಮಾಹಿತಿಗಾಗಿ ಸಲ್ಲಿಸಿದೆ.
8) ಸಹಾಯಕ ಇಂಜಿನಿಯರ್(ತಾಂ), ಉಪವಿಭಾಗ-1, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,
9) ಸಹಾಯಕ ಇಂಜಿನಿಯರ್(ತಾಂ), ಗ್ರಾಮಾಂತರ ಉಪವಿಭಾಗ, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,

ಮು.ಕ